ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಉಪಸ್ಥಿತರು:- ವೆಂಕನಗೌಡ ಆರ್ ಪಾಟೀಲ್

ತಹಶೀಲ್ದಾರರು ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ತಳವಾರ್ ಲೆಕ್ಕವ್ವ ಉರ್ಫ್ ಲಕ್ಷ್ಮವ್ವ ಗಂಡ ಲೇಟ್ ತಳವಾರ್ ದ್ಯಾಮಪ್ಪ ಹನಕನಹಳ್ಳಿ (ಬಿ ಶಿವಾನಂದ .ಎಸ್ ವೈ ಹಾದಿಮನಿ ವಕೀಲರು, ಹೂವಿನಡಹಗಲಿ) | ಎಂ ಚಂದ್ರಶೇಖರಪ್ಪ ತಂದೆ ಲೇಟ್ ಕೊಟ್ರುಬಸಪ್ಪ ಅಕ್ಕಿ ಪೇಟೆ ಹೂವಿನಹಡಗಲಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಶಿವಲಿಂಗನಹಳ್ಳಿ | 74ಬಿ | 1.93 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ಪೋತಿವಾರಸ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಗಳಾದ ತಳವಾರ್ ಲೆಕ್ಕವ್ವ ಉರ್ಫ್ ಲಕ್ಷ್ಮವ್ವ ಗಂಡ ಲೇಟ್ ತಳವಾರ್ ದ್ಯಾಮಪ್ಪ ಹನಕನಹಳ್ಳಿ ಇವರು ಅರ್ಜಿಸಲ್ಲಿಸಿದ್ದು, ಈ ಹಿನ್ನಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾದಿಕಾರಿಗಳು ಹಡಗಲಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 23/02/2015 ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೇಚ್ 39/2014-15 ದಿನಾಂಕ 23/01/2015 ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 16/04/2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಗಿ ದಿನಾಂಕ 06/10/2016ರ ವರೆಗೆ ವಿಚಾರಣೆ ನಡೆಸಲಾಗಿದೆ.

ವಾದಿಗಳಾದ ತಳವಾರ್ ಲೆಕ್ಕವ್ವ ಉರ್ಫ್ ಲಕ್ಷ್ಮವ್ವ ಗಂಡ ಲೇಟ್ ತಳವಾರ್ ದ್ಯಾಮಪ್ಪ ಹನಕನಹಳ್ಳಿ ಇವರು ಶಿವಲಿಂಗನಹಳ್ಳಿ ಗ್ರಾಮದ ಸರ್ವೇ ನಂಬರ 74 B (ವಿ) 1.93 ಎಕರೆ ಜಮೀನನ್ನು ಪಟ್ಟಾದಾರರ ವಾರಸುದಾರರಾದ ತಮ್ಮಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ.

ಪ್ರತಿವಾದಿಗಳು ಎಂ ಚಂದ್ರಶೇಖರಪ್ಪ ತಂದೆ ಲೇಟ್ ಕೊಟ್ರುಬಸಪ್ಪ ಅಕ್ಕಿ ಪೇಟೆ ಹೂವಿನಹಡಗಲಿ ಅವರ ಈ ವಿವಾದಿತ ಜಮೀನಿನಲ್ಲಿ ವಾದಿಗಳ ಮನವಿಯನ್ನು ವಜಾಗೊಳಿಸಬೇಕು, ಈ ಜಮೀನಿನಲ್ಲಿ ಅವರ ಹಿಸ್ಸಾ ಇದ್ದು ಸದರಿ ಜಮೀನನ್ನು ಕ್ರಯ ಡಾಕುಮೆಂಟ್ ಸಂಖ್ಯೆ 105/1981-82 ರಪ್ರಕಾರ ಕ್ರಯ ಪಡೆದಿದ್ದು, ಸದರಿ ಜಮೀನನ್ನು ತಾವುಗಳೆ ಸಾಗುವಳಿಮಾಡುತ್ತಿದ್ದು ನಮಗೂ ಸದರಿ ಜಮೀನಿನಲ್ಲಿ ಹಿಸ್ಸಾ ಇರುವುದಾಗಿ ತಿಳಿಸಿ ಪೋತಿ ವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ಲಿಖಿತ ತಕರಾರು ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳ/ಪ್ರತಿವಾದಿಗಳ ಹಾಗೂ ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು. ಈ ಕೆಳಕಂಡ ಆದೇಶ.

**ಸಂ/ಕಂ/ಪಹಣಿ/ವಿವಾದ/64/2014-15** **ದಿನಾಂಕ:-20/10/2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ ಅನ್ವಯ ಪೋತಿವಾರಸ ಪ್ರಕಾರ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ್ದು, ವಾದಿ-ಪ್ರತಿವಾದಿಗಳ ಭಾಧಿತರಾದಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಿ ಕೊಳ್ಳಬಹುದೆಂದು ಸೂಚಿಸುತ್ತಾ ಪ್ರಕರಣವನ್ನು ವಿಲೇಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 20/10/2016 ಬಹಿರಂಗ ನ್ಯಾಯಲದಲ್ಲಿ ಘೋಷಿಸಲಾಯಿತು.

20/10/16

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು;

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.